ಈಗಲೂ ಕೂಡ ಆ ವಿಚಾರವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಹಾಗಾದರೆ ಅದನ್ನು ಸೊಗಲದಲ್ಲಿ ಎಷ್ಟು ದಿವಸಗಳಲ್ಲಿ ಸ್ಥಾಪಿಸಲಾಗುವುದು ?

ಶ್ರೀ ಜಿ. ಎಸ್. ಬಾಗಲಕೋಟ್.—ಮಾನ್ಯ ಅಧ್ಯಕ್ಷರೆ. ಈ ಬೇಡಿಕೆಯಂ ಮಾನ್ಯ ಸದಸ್ಯರಿಂದ ಬರುತ್ತಿರತಕ್ಕಂಥ ಬಹಳ ದಿನಗಳ ಬೇಡಿಕೆಯಾಗಿದೆ. ಶ್ರೀ ಕ್ಷೇತ್ರ ಸೊಗಲವು ಬಹಳ ಪವಿತ್ರ ವಾದಂಥ ಕ್ಷೇತ್ರವಾಗಿದೆ. ಅಲ್ಲಿ ಅರಣ್ಯ ಕೂಡ ಇದೆ ಆದರೆ ದುರ್ದೈವವಶಾತ್ ಸಂಪನ್ಮೂಲದ ಸಹಾಯ ಇಲ್ಲದಿರುವುದರಿಂದ. ಅರಣ್ಯ ಇಲಾಖೆಯಿಂದಲೇ ಅದಕ್ಕೆ ಹೆಚ್ಚಿಗೆ ಖರ್ಚು ಮಾಡಬೇಕಾದಂಥ ಪ್ರಮೇಯಂ ಇರುವುದರಿಂದ ಆ ಬಗ್ಗೆ ಅದಷ್ಟು ಬೇಗ ಸದಸ್ಯರ ಬೇಡಿಕೆಯನ್ನು ಈಡೇರಿಸುವುದಕ್ಕೆ ಪ್ರಯತ್ನವನ್ನು ಮಾಡಲಾಗುವುದು.

ಶ್ರೀ ಶಿವಾನಂದ ಎಚ್. ಕೌಜಲಗಿ.—ಇನ್ನು ಎಷ್ಟು ದಿವಸಗಳು ಬೇಕಾಗಬಹುದು.

ಶ್ರೀ ಜಿ.ಎಸ್. ಬಾಗಲಕೋಟ್.—ಆದಷ್ಟು ಬೇಗ ತಮ್ಮ ಬೇಡಿಕೆಯನ್ನು ಈಡೇರಿಸಲಾಗುವುದು.

ಹರಪನಹಳ್ಳಿಯಲ್ಲಿ ಕರ್ನಾಟಕ ವಿದ್ಯುತ್ ಮಂಡಳಿ ಶಾಖಾ ಕಛೇರಿಯನ್ನು ತೆರೆಯುವುದು

೨೦೪೧. ಶ್ರೀ ಬಿ. ಹೆಚ್. ಯಂಕನಾಯ್ಕ (ಹರಪನಹಳ್ಳಿ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಇನ್ನೇ ದೊಡ್ಡ ತಾಲ್ಲೂಕು ಕೇಂದ್ರವಾಗಿರುವುದು ನಿಜವಲ್ಲವೆ ?

ಆ) ಸಧ್ಯ ಬಳ್ಳಾರಿಯಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಎರಡು ಡಿವಿಜನ್ ಕಛೇರಿಗಳು ಇರುವುದು ನಿಜವಲ್ಲವೆ ?

ಇ) ಹರಪನಹಳ್ಳಿಯಲ್ಲಿ ವಿದ್ಯುತ್ ಡಿವಿಜನ್ ಆಫೀಸ್ (ಸೆಕ್ಷನ್ ಕಛೇರಿ) ತೆಗೆಯಲಾಗುವುದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ನಿಜ.

ಆ) ನಿಜ.

ಇ) ರಾಜ್ಯದಲ್ಲಿ ವಿಭಾಗ, ಉಪವಿಭಾಗ ಶಾಖೆಗಳ ಪುನರ್ರಚನೆ ಬಗ್ಗೆ ಮಾಹಿತಿ ಸಂಗ್ರಹಿಸ ಲಾಗುತ್ತಿದ್ದು ಕನಿಷ್ಟ ಅಗತ್ಯ ಇರ್ಯಸಲು ಯತ್ನಿಸಲಾಗುತ್ತಿದೆ. ಬಳ್ಳಾರಿ ಜಿಲೆಯ ವಿಭಾಗ, ಉಪ ವಿಭಾಗ, ಶಾಖೆಗಳ ಪುನರ್ರಚನೆಯ ಪರಿಶೀಲನೆಯ ಸಮಯದಲ್ಲಿ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ.

ಶ್ರೀ ಬಿ. ಎಚ್. ಯಂಕನಾಯ್ಕ.—ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಹಡಗಲಿ, ಮತ್ತು ಕೂಡ್ಲಗಿಯ ಸೆಂಟರ್‌ನಲ್ಲಿ ಒಂದು ಡಿವಿಜನಲ್ ಕಛೇರಿಯನ್ನು ದಯವಾಡಿ ಮಂಡಳಿ ಯವರು ತೆಗೆಯಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಒಂದು ಸೆಕ್ಷನ್ ಆಫೀಸ್‌ನ್ನಾದರೂ ಕೊನೆಯ ಪಕ್ಷ ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಬಳ್ಳಾರಿ ಜಿಲ್ಲೆಯಲ್ಲಿ ರೂರಲ್ ಮತ್ತು ಸಿಟಿ ಡಿವಿಜನ್‌ಗಳು ಇವೆ. ಈ ಕಛೇರಿಯನ್ನು ಅದಕ್ಕಾಗಿ ಇರುವ ನಾರ್ಮ್ಸ್ ಪ್ರಕಾರ ಏನೇನು ಬರುತ್ತದೆ ಅದನ ಪ್ರಕಾರ. ಆದರೆ ಆಧಾರದ ಮೇಲೆ ಮಾಡುತ್ತೇವೆ. ೧೯೭೯ನೇ ಇಸವಿಯಲ್ಲಿ ಈ ರೀತಿಯಾದ ಉಪ ವಿಭಾಗಗಳನ್ನು ಯೋಜನೆ ಮಾಡಿ. ಆಗ ಇದ್ದಂಥ ಇನ್ಸ್‌ಪ್ರಕ್ಷೆನ್‌ಗೆ ತಕ್ಕಹಾಗೆ ಮಾಡಿದ್ದೇವೆ, ಆದರೆ ಈಗಲೂ ಕೂಡ ಒಂದೇ ಸಮನಾಗಿ ವಿದ್ಯುಚ್ಛಕ್ತಿ ಸಂಪರ್ಕಾಪೇಕ್ಷಿತರನ್ನು ಕಲ್ಪಿಸುತ್ತಾ ಇರುವುದರಿಂದ ಆ ನಾರ್ಮ್ಸ್‌ನ್ನು ಮತ್ತೆ ರಿವೈಸ್ ಮಾಡತಕ್ಕಂಥ ಅವಶ್ಯಕತೆ ಬಂದಿದೆ. ಆ ಬಗ್ಗೆ ಸರ್ವೆ ಆಗುತ್ತಾ ಇದೆ. ಅದರ ಆಧಾರದ ಮೇಲೆ ಸೂಕ್ತವಾದ ಅವಶ್ಯಕತೆ ಕಂಡುಬಂದರೆ ಅಲ್ಲಿ ಉಪ-ವಿಭಾಗವನ್ನು ತೆರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ನಮ್ಮ ತಾಲ್ಲೂಕಿನಲ್ಲಿ ಒಂದೇ ಹೆಡ್ ಆಫೀಸ್ ಇರುವುದರಿಂದ ವಾರಗಟ್ಟಲೆ ನಮ್ಮ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇರುವುದಿಲ್ಲ. ಆದುದರಿಂದ ಸೆಕ್ಷನ್ ಆಫೀಸರ್ ಆದರೆ ಮಂಡಳಿಯ ಅಧಿಕಾರಿಗಳು ಇರುತ್ತಾರೆ, ಮತ್ತು ವಿದ್ಯುಚ್ಛಕ್ತಿಯ ವ್ಯವಸ್ಥೆಯನ್ನು ಅವರು ನೋಡಿಕೊಂಡು ಹಳ್ಳಿಗರಿಗೆ ಅನುಕೂಲ ಮಾಡಿಕೊಡುತ್ತಾರೆ. ಆದುದರಿಂದ ದಯಮಾಡಿ ಮಾನ್ಯ ಸಚಿವರು ಈ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ,—ಅಲ್ಲಿರತಕ್ಕಂಥ ಸ್ಥಾವರಗಳಿಗೆ ಅತ್ಯವಶ್ಯಕವಾಗಿ, ಉಪವಿಭಾಗ, ಸೆಕ್ಷನ್ ಆಫೀಸ್ ಅವಶ್ಯಕತೆ ಕಂಡು ಬಂದರೆ. ಆದಷ್ಟು ಬೇಗ ಮಾಡಿಕೊಡೋಣ.

ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ಕೈಗಾರಿಕಾ ಎಸ್ಟೇಟ್ ಸ್ಥಾಪನೆ ಮಾಡುವುದು.

೧೩೬೯. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಬಂದರಂ, ವಿಮಾನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿವಿಧ ತಾಲ್ಲೂಕು ಕೇಂದ್ರುಗಳಲ್ಲಿ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಕಡೆ ಕೈಗಾರಿಕಾ ಎಸ್ಟೇಟ್‌ಗಳನ್ನು ನಿರ್ಮಿಸಲಾಗಿದೆ?

ಇ) ಹೊಸದುರ್ಗ ಪಟ್ಟಣದಲ್ಲಿ ನಿರ್ಮಿಸಿರುವ ಕೈಗಾರಿಕಾ ಎಸ್ಟೇಟ್‌ಗಳಿಷ್ಟು ಹಾಗೂ ನಿರ್ಮಾಣಕ್ಕೆ ವೆಚ್ಚವಾಡಲಾದ ಮೊತ್ತವೆಷ್ಟು?

ಶ್ರೀ ಎಂ. ರಘುಪತಿ (ಬಂದರು, ವಿಮಾನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು) —

ಅ) ಹೌದು.

ಆ) ನಾಲ್ಕು ಸ್ಥಳಗಳಲ್ಲಿ ೧) ಚಿತ್ರದುರ್ಗ
೨) ದಾವಣಗೆರೆ
೩) ಹರಿಹರ
೪) ಹೊಸದುರ್ಗ

ಇ) ಒಟ್ಟು ೧೬ ಪೆಡ್ಡುಗಳು
೮ 'ಸಿ' ಮಾದರಿ ಶೆಡ್ಡುಗಳು
'ಡಿ' ಮಾದರಿ ಪೆಡ್ಡುಗಳ ನಿರ್ಮಾಣಕ್ಕೆ ತಗುಲಿದ ಒಟ್ಟು ವೆಚ್ಚ ರೂ. ೨೯.೧೮ ಲಕ್ಷಗಳು.

ಶ್ರೀ ಜಿ. ರಾಮದಾಸ್.—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕೈಗಾರಿಕಾ ಎಸ್ಟೇಟ್ ಸ್ಥಾಪನೆ ಮಾಡಿರುವ ಉದ್ದೇಶ ಏನು ಎನ್ನುವುದನ್ನು ವಿವರವಾಗಿ ಹೇಳಬೇಕಂ.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ಉದ್ಯಮಗಳಿಗೆ ಸಹಾಯ ಮಾಡಬೇಕೂ ಮತ್ತು ಉದ್ಯೋಗಾವಕಾಶ ಕೊಡಬೇಕೆಂದು ಈ ಎಸ್ಟೇಟ್‌ಗಳನ್ನು ಸ್ಥಾಪನೆ ಮಾಡಲಾಗಿದೆ.

ಶ್ರೀ ಜಿ. ರಾಮದಾಸ್.—ನಮ್ಮ ತಾಲ್ಲೂಕಿನಲ್ಲಿ ಸುಮಾರು ೧೬ ಕೈಗಾರಿಕಾ ಎಸ್ಟೇಟ್ ಪೆಡ್‌ಗಳನ್ನು ಕಟ್ಟಿಸಿದ್ದಾರೆ. ಇವುಗಳನ್ನು ಕಟ್ಟಿಸಿ ಸುಮಾರು ೨ ವರ್ಷವಾಯಿತು. ಅಲ್ಲಿ ಯಾರು ಕೆಲಸ ಮಾಡುತ್ತಾರೆ, ಅಲ್ಲಿ ಏನೂ ಇಲ್ಲ, ವಾಚ್‌ಮನ್ ಇಲ್ಲ, ಯಾರೂ ಬಂದಂ ಕೆಲಸ ಮಾಡುತ್ತಿಲ್ಲ. ಅವುಗಳನ್ನು ಈವರೆಗೆ ಯಾರಿಗೂ ಕೊಟ್ಟಿಲ್ಲ. ಅವುಗಳಿಗೆ ರೆಂಟ್ಸ್ ಫಿಕ್ಸ್ ಮಾಡಿಲ್ಲ. ಈ ಬಗ್ಗೆ ದಯಮಾಡಿ ತಿಳಿಸಿ